#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–26-06–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : ಯಲಹಂಕ **ಪುಟ್ಟೇನಹಳ್ಳಿ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2413/2018

ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಯಲಹಂಕ **ಪುಟ್ಟೇನಹಳ್ಳಿ ಕೆರೆ**ಯು ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಪುಟ್ಟೇನಹಳ್ಳಿ ಗ್ರಾಮದ ಸರ್ವೇ ನಂ 36 ಮತ್ತು ಅಟ್ಟೂರು ಗ್ರಾಮದ ಸರ್ವೇ ನಂ 49 ರಲ್ಲಿ ಒಟ್ಟು 37 ಎಕರೆ ವಿಸ್ತೀರ್ಣವನ್ನು ಹೊಂದಿದೆ.

ಈ ಕೆರೆಯಲ್ಲಿ ಕೆಲವು ಸಮಸ್ಯೆಗಳಿದ್ದು, ಅವುಗಳನ್ನು ತಮ್ಮ ಗಮನಕ್ಕೆ ಈ ಕೆಳಗಿನಂತೆ ತಿಳಿಸಲಾಗಿದೆ.

1. 2015ರ ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಈ ಕೆರೆಯು ಒಟ್ಟು 1 ಎಕರೆ ಒತ್ತುವರಿಯಾಗಿದೆ (ದಾಖಲೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ). 2015ರಿಂದ 2019ರವರೆಗೆ ನಡೆದಿರಬಹುದಾದ ಒತ್ತುವರಿಯನ್ನು ಪುನರ್ ಸರ್ವೇ ಮಾಡಲು ಭೂದಾಖಲೆಗಳ ಜಂಟಿ ನಿರ್ದೇಶಕರಿಗೆ ಆದೇಶಿಸಬೇಕೆಂದು ಮತ್ತು ಒತ್ತುವರಿ ತೆರವುಗೊಳಿಸಲು ನಿಗದಿತ ಕಾಲಾವಕಾಶದೊಂದಿಗೆ ತಹಶೀಲ್ದಾರ್, ಯಲಹಂಕ ತಾಲ್ಲೂಕು ರವರಿಗೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕಾಗಿ ಹಾಗೂ ಕರ್ನಾಟಕ ಭೂ ಕಂದಾಯ ಕಾಯಿದೆ 1964, ಸೆಕ್ಷನ್ 192 ಎ ಮತ್ತು ಬಿ ಪ್ರಕಾರ(ಪ್ರತಿಗಳನ್ನು ಲಗತ್ತಿಸಲಾಗಿದೆ) ಒತ್ತುವರಿದಾರರಿಗೆ ಮತ್ತು ಒತ್ತುವರಿ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲಾ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕಾಗಿ ತಮ್ಮಲ್ಲಿ ಕಳಕಳಿಯಾಗಿ ವಿನಂತಿಸುತ್ತೇವೆ.

2. ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ರಾಜಕಾಲುವೆ ಮೂಲಕ ಕೆರೆಗೆ ಸೇರಿ ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ದೊಡ್ಡಬಳ್ಳಾಪುರ ರಸ್ತೆಯ ಬಿಎಂಟಿಸಿ ಬಸ್ ಡಿಪೋ ಹತ್ತಿರ ಒಳಚರಂಡಿ ನೀರು ಉಕ್ಕಿ ಹರಿದು ಕೆರೆಗೆ ಸೇರುತ್ತಿದೆ. ಈ ಬಗ್ಗೆ ಬಿಡಬ್ಲ್ಯೂಎಸ್ಎಸ್‌ಬಿ ಅಧ್ಯಕ್ಷರಿಗೆ **ದಿನಾಂಕ–12-06–2019ರಂದು** ಕೊಳಚೆ ನೀರು ಹರಿಯುವ ಫೋಟೋಗಳ ಸಮೇತ ಪತ್ರ ಬರೆದಿದ್ದು, ತಮ್ಮ ಅವಗಾಹನೆಗೆ ಲಗತ್ತಿಸಲಾಗಿದೆ. ಕೊಳಚೆ ನೀರು ಕೆರೆಗೆ ಸೇರದಂತೆ ಕ್ರಮವಹಿಸಲು ಬಿಡಬ್ಲ್ಯೂಎಸ್ಎಸ್‌ಬಿ, ಬಿಬಿಎಂಪಿ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ತಾವು ನಿರ್ದೇಶನ ನೀಡಬೇಕಾಗಿ ವಿನಂತಿಸುತ್ತೇವೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು